**KHIDWAI ENGLISH SCHOOL**

**SUB: KANNADA**

**STD: 4 ಕನ್ನಡಮ್ಮನ ಹರಕೆ (ಪದ್ಯ)**

**PRESENTED BY: ISHRATH MANSOORA**

ಅ) ಒಂದೊಂದು ವಾಕ್ಯದಲ್ಲಿ ಉತ್ತರಿಸಿ:-

೧. ಕನ್ನಡದ ಕಂದ ಯಾವುದಕ್ಕಾಗಿ ಹೋರಾಡಬೇಕು?

ಉತ್ತರ: ಕನ್ನಡದ ಕಂದ ಕನ್ನಡಕ್ಕಾಗಿ ಹೋರಾಡಬೇಕು.

೨. ಕನ್ನಡವನ್ನು ಮರೆತರೆ ಯಾರನ್ನು ಮರೆತಂತೆ?

ಉತ್ತರ: ಕನ್ನಡವನ್ನು ಮರೆತರೆ ಹೆತ್ತ ತಾಯಿಯನ್ನು ಮರೆತಂತೆ.

೩. ಕನ್ನಡದ ಕಂದ ಯಾವುದನ್ನು ಮರೆಯಬಾರದು?

ಉತ್ತರ: ಕನ್ನಡದ ಕಂದ ಕನ್ನಡಮ್ಮನ ಹರಕೆಯನ್ನು ಮರೆಯಬಾರದು.

೪. ಕನ್ನಡ ನುಡಿಯ ಸೊಗಸನ್ನು ಯಾವುದಕ್ಕೆ ಹೋಲಿಸಲಾಗಿದೆ?

ಉತ್ತರ: ಕನ್ನಡ ನುಡಿಯ ಸೊಗಸನ್ನು ತಾಯಿ ಎದೆ ಹಾಲಿಗೆ ಹಾಗೂ ಆಕೆಯ ಅಪ್ಪುಗೆಯಿಂದುಂಟಾಗುವ ಆನಂದಕ್ಕೆ ಹೋಲಿಸಲಾಗಿ

ಆ) ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ ಖಾಲಿ ಸ್ಥಳದಲ್ಲಿ ಬರೆಯಿರಿ:-

೧. ಕನ್ನಡಕ್ಕೆ ಹೋರಾಡು ಕನ್ನಡದ ________ ಉತ್ತರ: ಕಂದಾ

(ಅ. ವೀರ ಆ. ಶೂರ ಇ. ಧೀರ ಈ. ಕಂದಾ)

೨. ಮರೆತೆಯಾದರೆ ________ ಮರೆತಂತೆ ನನ್ನ. ಉತ್ತರ: ಅಯ್ಯೊ

(ಅ. ದಮ್ಮಯ್ಯ ಆ ಅಯ್ಯೊ ಇ. ಕಂದಯ್ಯ ಈ. ನನ್ನ)

೩. ಮೊಲೆಯ ಹಾಲೆಂತಂತೆ ________ ಬಾಯ್ಗೆ. ಉತ್ತರ: ಸವಿಜೇನು

(ಅ. ಹಜ್ಜೇನು ಆ. ಕಿರಿಜೇನು ಇ. ಸವಿಜೇನು ಈ. ಹಲ್ಜೇನು)

೪. ಹೋರಾಡು ಕನ್ನಡಕೆ ________ ರನ್ನಾ. ಉತ್ತರ: ಕಲಿಯಾಗಿ

(ಅ. ವೀರನಾಗಿ ಆ. ಶೂರನಾಗಿ ಇ. ಕಲಿಯಾಗಿ ಈ. ಧೀರನಾಗಿ)

ಇ) ಪದ್ಯದಲ್ಲಿ ಬಿಟ್ಟಿರುವ ಮುಂದಿನ ಸಾಲುಗಳನ್ನು ಬರೆಯಿರಿ:

೧. ದಮ್ಮಯ್ಯ ಕಂದಯ್ಯ
____________
____________
ಮರೆಯದಿರು ಚಿನ್ನಾ!

ಉತ್ತರ: ದಮ್ಮಯ್ಯ ಕಂದಯ್ಯ
ಬೇಡುವೆನುನಿನ್ನ,
ಕನ್ನಡಮ್ಮನಹರಕೆ,
ಮರೆಯದಿರು ಚಿನ್ನಾ!

೨. ಮರೆತೆಯಾದರೆ ಅಯ್ಯೊ,
____________
____________
ಕಲಿಯಾಗಿ ರನ್ನಾ!

ಮರೆತೆಯಾದರೆ ಅಯ್ಯೊ,
ಮರೆತಂತೆ ನನ್ನ
ಹೋರಾಡು ಕನ್ನಡಕ್ಕೆ,
ಕಲಿಯಾಗಿ ರನ್ನಾ!

ಈ) ಮಾದರಿಯಂತೆ ಕೊಟ್ಟಿರುವ ಪದಗಳಿಗೆ ಪ್ರಾಸ ಪದ ಬರೆಯಿರಿ:-

ಮಾದರಿ: ದಮ್ಮಯ್ಯ : ಕಂದಯ್ಯ

ಹೋರಾಡು : ________ ಉತ್ತರ: ಕಾಪಾಡು

ಬಾಯ್ಗೆ : ________ ಉತ್ತರ: ಮೆಯ್ಗೆ

ಬಾಳ್ಗೆ : ________ ಉತ್ತರ: ಏಳ್ಗೆ

ಚಿನ್ನಾ : ________ ಉತ್ತರ: ರನ್ನಾ

Scanned with CamScanner

ಕೊಟ್ಟಿರುವ ಪದಗಳಲ್ಲಿ ಬರಹದ ಸರಿಯಾದ ರೂಪವನ್ನು ಆರಿಸಿ ಬರೆಯಿರಿ:-

| | | | |
|---|---|---|---|
| ಓರಾಡು | – | ಹೋರಾಡು | ಉತ್ತರ: ಹೋರಾಡು |
| ಹರಕೆ | – | ಅರಕೆ | ಉತ್ತರ: ಹರಕೆ |
| ಆನಂದ | – | ಹಾನಂದ | ಉತ್ತರ: ಆನಂದ |
| ಹಯ್ಯೊ | – | ಅಯ್ಯೊ | ಉತ್ತರ: ಅಯ್ಯೊ |
| ಹಾಲು | – | ಆಲು | ಉತ್ತರ: ಹಾಲು |
| ಅಪ್ಪುಗೆ | – | ಹಪ್ಪುಗೆ | ಉತ್ತರ: ಅಪ್ಪುಗೆ |

Scanned with CamScanner